(86)

<u>ಕರ್ನಾಟಕ ಸರ್ಕಾರ</u>

<u>ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.</u>

ಸಂ.ಕಂ/ಹಬ/ವಿವಾದ/61//2014-15 ದಿ:25-07-2016

| ವಾದಿಗಳು | ವಿರುದ್ದ | ಪ್ರತಿವಾದಿಗಳು |
|---|---|---|
| 1.ಮಾಳಮ್ಮ ಗಂಡ ಲೇಟ್ ಬಾಲಪ್ಪ<br>2.ಸಣ್ಣ ಈರಣ್ಣ ತಂದೆ ಲೇಟ್ ಭೀಮಪ್ಪ<br>ಬಂಡ್ರಾಳ ಗ್ರಾಮ. ಸಿರುಗುಪ್ಪ (ತಾ) | | ಬಿ.ಭೀಮಕ್ಕ ಗಂಡ ಹಂಪಯ್ಯ<br>ಬಂಡ್ರಾಳ ಗ್ರಾಮ. ಸಿರುಗುಪ್ಪ (ತಾ) |

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಬಂಡ್ರಾಳ | 183/ಸಿ | 10-44 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಬಂಡ್ರಾಳ ಗ್ರಾಮದ ಸ,ನಂ.183/ಸಿ ಪೈಕಿ ವಿ:10-44 ಎಕ್ರೆ ಜಮೀನು ಹಾಲಿ ಪಹಣಿ ದಾಖಲೆ ಪ್ರಕಾರ ಬೆಳಗಲ್ ಹಿರೇಭೀಮ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿನಾಂಕ:25-03-2001 ರಂದು ಇವರ ಪತ್ನಿ ಸಂಜೀವಮ್ಮ ಇವರು ದಿ:20-04-2002 ರಂದು ಮರಣ ಹೊಂದಿದ್ದು, ಮೃತರ ವಾರಸುದಾರರಾದ **1.ಮಾಳಮ್ಮ ಗಂಡ ಲೇಟ್ ಬಾಲಪ್ಪ, 2.ಸಣ್ಣ ಈರಣ್ಣ ತಂದೆ ಲೇಟ್ ಭೀಮಪ್ಪ** ಇವರು ಪೋತಿವಾರಸು ಮೇರೆಗೆ ಹಕ್ಕು ಬದಲಾವಣೆ ಮಾಡಲು ಕೋರಿ ಸಲ್ಲಿಸಿದ ಅರ್ಜಿ ಪ್ರಯುಕ್ತ ಅರ್ಜಿದಾರರ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಬಂಡ್ರಾಳ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ **ಬಿ.ಭೀಮಕ್ಕ ಗಂಡ ಹಂಪಯ್ಯ** ಇವರು **"**ಪ್ರಸ್ತಾಪಿತ ಜಮೀನಿನಲ್ಲಿ ತಮಗೂ ಭಾಗವಿದ್ದು, ಅರ್ಜಿದಾರರ ಹೆಸರಿಗೆ ಪಟ್ಟಾ ಬದಲಾವಣೆ ಮಾಡಬಾರದೆಂದು**"** ದಿನಾಂಕ:17-12-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರು ಸದ್ರಿ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಹ,ಬ. ಸಂಖ್ಯೆ:17/2014-15 ದಿನಾಂಕ:20-12-2014 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:25-04-2015 ರಿಂದ 14-03-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ,ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಕರ್ನಾಟಕ ಸರ್ಕಾರ ★ ಸಿರುಗುಪ್ಪ ★ ತಹಶೀಲ್ದಾರರ ನ್ಯಾಯಾಲಯ

(54)

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ಪ್ರತಿವಾದಿ **ಬಿ.ಭೀಮಕ್ಕ ಗಂಡ ಹಂಪಯ್ಯ** ಇವರು ಮೊದಲಿಗೆ ದಾವಾ ಜಮೀನನ್ನು ಹಕ್ಕು ಬದಲಾವಣೆ ಮಾಡಬಾರದೆಂದು ತಿಳಿಸಿದ್ದು, ನಂತರ ದಿ:16-12-2015 ರಂದು ತಾವು ರಾಜೀಯಾಗಿರುವುದಾಗಿ ತಿಳಿಸಿದ ಪ್ರಯುಕ್ತ ಲಿಖಿತ ಹೇಳಿಕೆ ನೀಡಲು ತಿಳಿಸಲಾಯಿತು. ನಂತರ ದಿನಾಂಕ:11-01-2016 ರಂದು ರೂ.20/-ರ ಛಾಪಾ ಕಾಗದದ ಮೇಲೆ ನೋಟರಿ ಸಮಕ್ಷಮ ಪ್ರಮಾಣಿಕರಿಸಿ"ತಾವುಗಳು ಗ್ರಾಮದ ಹಿರಿಯರ ಸಮಕ್ಷಮ ರಾಜೀಯಾಗಿದ್ದು, ದಾವಾ ಜಮೀನನ್ನು ವಾದಿಗಳ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ತನ್ನ ಯಾವುದೇ ರೀತಿಯ ಆಕ್ಷೇಪಣೆಗಳು ಇರುವುದಿಲ್ಲವೆಂದು" ಅಫಿಡೆವಿಟ್ ಹಾಜರು ಪಡಿಸಿರುತ್ತಾರೆ.

ಆದ್ದರಿಂದ, ಸಿರುಗುಪ್ಪ ತಾಲೂಕು ಬಂಡ್ರಾಳ ಗ್ರಾಮದ ಸ,ನಂ.183/ಸಿ ಪೈಕಿ ವಿ:10-44 ಎಕ್ರೆ ಜಮೀನಿಗೆ ಪೋತಿ ವಾರಸು ಮೇರೆಗೆ ಅರ್ಜಿದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/61/2014-15** **ದಿ:25-07-2016**

## <u>ಆದೇಶ</u>

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಬಂಡ್ರಾಳ ಗ್ರಾಮದ ಸ,ನಂ.183/ಸಿ ಪೈಕಿ ವಿ:10-44 ಎಕ್ರೆ ಜಮೀನು ಹಾಲಿ ಪಹಣಿ ದಾಖಲೆ ಪ್ರಕಾರ ಬೆಳಗಲ್ ಹಿರೇಭೀಮ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿನಾಂಕ:25-03-2001 ರಂದು ಇವರ ಪತ್ನಿ ಸಂಜೀವಮ್ಮ ಇವರು ದಿ:20-04-2002 ರಂದು ಮರಣ ಹೊಂದಿರುವುದರಿಂದ, ಮೃತರ ವಾರಸುದಾರರಾದ **1.ಮಾಳಮ್ಮ ಗಂಡ ಲೇಟ್ ಬಾಲಪ್ಪ, 2.ಸಣ್ಣ ಈರಣ್ಣ ತಂದೆ ಲೇಟ್ ಭೀಮಪ್ಪ** ಇವರ ಹೆಸರಿಗೆ ಪೋತಿ ಪಟ್ಟಾ ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:25-07-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

**ತಹಶೀಲ್ದಾರರು,ಸಿರುಗುಪ್ಪ**

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ

2.ವಾದಿ-ಪ್ರತಿವಾದಿಗಳಿಗೆ

3.ಕಛೇರಿ ಕಡತಕ್ಕೆ